

# ಗಗನ ಕುಸುಮ

ಅಸಾಧ್ಯವಾದ ಚೆಲುವೆ ಒಬ್ಬಳ ಪಕ್ಕದಲ್ಲೇ ವಿಮಾನದಲಿ ಆತ ಕುಳಿತಿದ್ದ. ಅವಳು ಯಾವ ಜನ್ಮದವಳೊ; ಯಾವ ದೇಶದ ಮೂಲೆಯವಳೊ; ಸುರಸುಂದರಿ. ಆಕಾಶದಲಿ ವಿಮಾನದ ಹಕ್ಕಿ ಸಾಗುತ್ತಿತ್ತು. ಮೋಹಕ್ಕೆ ಎಲ್ಲ ಲೋಕದಲಿ ಭಾಷೆ ಒಂದೇ... ದೇಹ ತಳಮಳಿಸಿ ಅವಳ ನಿಟ್ಟುಸಿರು ಅವಳ ಸುಕೋಮಲ ದೇಹವನು ಉಸಿರಿನಲೇ ಮುಟ್ಟಿತ್ತು. ಕಣ್ಣ ಮರೆಯಲ್ಲಿ ನಗುತ್ತ ನೀಲಾಕಾಶದ ಅನಂತತೆಯತ್ತಲೇ ದಿಟ್ಟಿಸುತ್ತಿದ್ದಳು.

ಚೆಲುವೆಂದರೆ ತುಂಬಿದ ಹೆಣ್ಣ ಪ್ರಾಯದ ದೇಹವೇ... ತಾನು ಈ ಕ್ಷಣವೇ ಸಾಯುವುದಾದರೆ ಇವಳ ಈ ಆಕಾಶದ ಚಲನೆಯಲ್ಲೇ ಅಪ್ಪಿಕೊಂಡು ಮುದ್ದಿಸಿಕೊಂಡು ಕಣ್ಣು ಮುಚ್ಚಿಕೊಳ್ಳುವುದೇ ವಿಮೋಚನೆ ಅಲ್ಲವೇ ಎಂದೆನಿಸಿತು. ಸಂಪತ್ತಿನ ಸರ್ವಸಶಕ್ತ ನಾನು... ಎಲ್ಲವನೂ ಇವಳ ಒಂದು ಲೋಹದ ಗಳಿಗೆಯ ಮಿಲನಕ್ಕಾಗಿ ಧಾರೆ ಎರೆದು ಬಿಡುವೆ ಎಂದು ಆತ ಸಿದ್ಧನಾದ. ಅವಳು ಮಾಯಕದ ಮಂಪರಲ್ಲಿ ಅವನ ಹೆಗಲ ಮೇಲೆಯೇ ಸೌಂದರ್ಯದ ಕಿರೀಟವನು ಇಟ್ಟಂತೆ ಕ್ಷಣದ ಯಾವುದೊ, ಯಾರದೊ, ಎಂತದೊ ಹಗಲುಗನಸಿನಲಿ ವಾಲಿದ್ದಳು. ವಿಮಾನದ ರೆಕ್ಕೆಗಳು ಆಗಾಗ ಅತ್ತ ಇತ್ತ ಮೇಲೆ ಕೆಳಗೆ ಚಲಿಸುತ್ತಿದ್ದವು. ಅದರಂತೆಯೇ ಅವಳ ರಮ್ಯವಾಲಾಟ ಸಾಗಿತ್ತು.

ಹಾರಾಟದಲಿ ಏನೊ ನಿಸರ್ಗದ ಅಡಚಣೆ ಉಂಟಾಗಿತ್ತು. ಹೆಗಲ ಮೇಲೆ ತಲೆ ಇಟ್ಟು ವಾಲಿದವಳ ಚೆಲುವನ್ನು ಕ್ಷಣಗಣನೆಯಲಿ ಅಪ್ಪಿಕೊಂಡಂತೆ ದಿಟ್ಟಿಸಿ ಭಾವದಲೇ ಅವಳಿಗೆ